## ವಿಂಡೋಸ್ ಸ್ಟೋರ್‌ನಲ್ಲಿ ಡೆಸ್ಕ್‌ಟಾಪ್

ಆರಂಭದ ದಿನಗಳಲ್ಲಿ ಯುನಿವರ್ಸಲ್ ವಿಂಡೋಸ್ ವೇದಿಕೆಗೆ ಹಾಕಲಾದ ಡೆಸ್ಕ್‌ಟಾಪ್ ಆ್ಯಪ್‌ಗಳು ಈ ವಿಂಡೋಸ್ ಸ್ಟೋರ್‌ನಲ್ಲಿ ಲಭ್ಯ. ಎವ್ವರ್‌ನೋಟ್, ಡಬಲ್ ಟ್ವಿಸ್ಟ್, ಫೋಟೊಶೇಪ್, ರಿಲ್ಯಾಬ್, ವೋಯಾ ಮೀಡಿಯ ಮೊದಲಾದ ಆ್ಯಪ್‌ಗಳು ವಿಂಡೋಸ್ 10 ವಾರ್ಷಿಕೋತ್ಸವದ ಅಂಗವಾಗಿ ಅಪ್‌ಡೇಟ್ ಆಗಿವೆ. ಡೆಸ್ಕ್‌ಟಾಪ್ ಬ್ರಿಡ್ಜ್ ಮೂಲಕ ಇವುಗಳನ್ನು ಸ್ಟೋರ್‌ಗೆ ಸೇರಿಸಲಾಗಿದ್ದು, ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್, ಗೇಮ್ ಕನ್ಸೋಲ್ ಮೊದಲಾದ ವಿಂಡೋಸ್ 10 ಸಾಧನಗಳಲ್ಲಿ ಅಳವಡಿಸಿಕೊಳ್ಳಬಹುದು.




## ಸುಧಾರಿತ ಸ್ವಿಫ್ಟ್‌ಕೀ

ಐಒಎಸ್ ಹಾಗೂ ಆ್ಯಂಡ್ರಾಯ್ಡ್ ಬಳಕೆದಾರರಲ್ಲಿ ಜನಪ್ರಿಯವಾಗಿರುವ ಈ ಕೀಬೋರ್ಡ್ ಶಬ್ದಗಳನ್ನು ಊಹಿಸಿ ದೀರ್ಘ ಬರಹರೂಪದ ಸಂವಹನಕ್ಕೆ ನೆರವಾಗುತ್ತದೆ. ಈಗ ನ್ಯೂರಲ್ ನೆಟ್‌ವರ್ಕ್‌ಗೆ ಇದನ್ನು ಸಂಯೋಜನೆ ಮಾಡಲಾಗಿದ್ದು, ಶಬ್ದಗಳ ಊಹೆ ಇನ್ನಷ್ಟು ಕರಾರುವಾಕ್ಕಾಗಿದೆ ಹಾಗೂ ಸ್ವಯಂಚಾಲಿತವಾಗಿ ಸರಿಪಡಿಸಿಕೊಳ್ಳುತ್ತದೆ. ಈ ನೆಟ್‌ವರ್ಕ್ ವಾಕ್ಯವನ್ನು ವಿಮರ್ಶಿಸಿ, ಇಡೀ ಸಂವಹನದ ಆಧಾರದ ಮೇಲೆ ಸರಿಯಾದ ಪದಗಳನ್ನು ಹುಡುಕಿ ಕೊಡುತ್ತದೆ. ಇದರಿಂದಾಗಿ ಬಳಕೆದಾರರು ಸರಿಯಾದ ಉತ್ತರಗಳನ್ನು ಕ್ಷಣಮಾತ್ರದಲ್ಲಿ ನೀಡಬಹುದು. ಉದಾಹರಣೆಗೆ 'ಲೆಟ್ ಅಸ್ ಮೀಟ್' ಎಂದು ಟೈಪ್ ಮಾಡಿದರೆ, ನಿಮ್ಮ ಈ ಹಿಂದಿನ ಸಂಭಾಷಣೆ ಆಧರಿಸಿ ಮುಂದಿನ ಶಬ್ದ ಹೋಟೆಲ್ ಅಥವಾ ಆಫೀಸ್ ಎಂಬುದನ್ನು ನಿರ್ಧರಿಸುತ್ತದೆ.







## ಮೈಸ್ಕ್ರಿಪ್ಟ್ ನೆಬೊ

ದುಬಾರಿ ಬೆಲೆಯ ಟ್ಯಾಬ್ಲೆಟ್‌ಗಳಲ್ಲಿ ಟಿಪ್ಪಣಿ ತೆಗೆದುಕೊಳ್ಳಲು ಇದು ಅನುಕೂಲಕರ. ಇದು ಕೈಬರಹ, ಮತ್ತು ಇತರ ಬರಹಗಳನ್ನು ಮಿಶ್ರ ಮಾಡಲು ಅತ್ಯುತ್ತಮವಾದ ಆ್ಯಪ್. ಐಪ್ಯಾಡ್, ವಿಂಡೋಸ್ 10 ಮೊದಲಾದ ಸಾಧನಗಳಲ್ಲಿ ಇದನ್ನು ಬಳಸಬಹುದು. ಆ್ಯಪಲ್ ಪೆನ್ಸಿಲ್, ಸರ್‌ಫೇಸ್ ಪೆನ್ ಮೊದಲಾದವುಗಳನ್ನು ಬೆಂಬಲಿಸುವಂತಿರಬೇಕು. ಸದ್ಯ ಉಚಿತವಾಗಿ ದೊರೆಯುತ್ತಿರುವ ಈ ಆ್ಯಪ್‌ನಲ್ಲಿ ವಿವಿಧ ವಿನ್ಯಾಸಗಳ ಅಕ್ಷರಗಳನ್ನು ಮಿಶ್ರ ಮಾಡಬಹುದು, ಕೈಯಲ್ಲಿ ಬರೆದವುಗಳನ್ನು ಕೂಡಾ ಎಡಿಟ್ ಮಾಡಬಹುದು, ಬರೆದವುಗಳನ್ನು ಆಚೀಚೆ ಮಾಡಿ ಹಾಕಬಹುದು, ಮಧ್ಯೆ ಲೆಕ್ಕಗಳು ಬಂದರೆ ಅವುಗಳನ್ನು ಗುರುತಿಸಬಹುದು. ಕೈಯಲ್ಲೇ ಬರೆದ ವಿವಿಧ ಆಕೃತಿಗಳನ್ನು ಡಿಜಿಟಲ್ ವೆಕ್ಟರ್ ಚಿತ್ರಗಳಿಗೆ ಬದಲಾಯಿಸಬಹುದು.




## ಹೋಂ ಆ್ಯಪ್

ಆ್ಯಪಲ್‌ನ ಈ ಅಪ್‌ಗ್ರೇಡ್ ಮಾಡಲಾದ ಆ್ಯಪ್‌ನಿಂದ ನಿಮ್ಮ ಮನೆಯನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿ ಇಡಲು ಸಾಧ್ಯ. ಈ ಮೊದಲು ಬಂದ ಹೋಂಕಿಟ್ ಮನೆಯ ದೀಪ, ಲಾಕ್ ಹಾಗೂ ಇತರ ಸ್ಮಾರ್ಟ್ ಹೋಂ ಸಾಧನಗಳನ್ನು ನಿಯಂತ್ರಿಸಲು ಸಿರಿ ಧ್ವನಿ ಆಧಾರಿತ ಆ್ಯಪ್ ನೆರವನ್ನು ಪಡೆದಿತ್ತು. ಇದನ್ನು ಮೂರನೇ ಪಾರ್ಟಿ ಆ್ಯಪ್‌ನಿಂದ ಕಾನ್‌ಫಿಗರ್ ಮಾಡುವ ಅವಶ್ಯಕತೆ ಇತ್ತು. ಆದರೆ ಹೊಸ ಹೋಂ ಆ್ಯಪ್ ಇವೆಲ್ಲವುಗಳನ್ನು ಒಂದೇ ಛಾವಣಿಯಡಿ ತಂದಿದ್ದು, ಬಳಸುವುದು ಸುಲಭ. ಮೂರು ಟ್ಯಾಬ್‌ಗಳಿದ್ದು, ಇವು ಹೋಂ ಲ್ಯಾಂಡಿಂಗ್ ಟ್ಯಾಬ್, ರೂಂ ಟ್ಯಾಬ್ ಹಾಗೂ ಆಟೋಮೇಶನ್ ಟ್ಯಾಬ್‌ಗಳು. ನೀವು ಪದೇ ಪದೇ ಬಳಕೆ ಮಾಡುವ ಸಾಧನವನ್ನು ಫೇವರೇಟ್‌ಗೆ ಸೇರಿಸಬಹುದು. ಉದಾಹರಣೆಗೆ ದೀಪಗಳ ಪ್ರಕಾಶ ಹಾಗೂ ಬಣ್ಣ ಬದಲಾವಣೆ ಮಾಡುವುದು.

■ ಎಸ್.ತುಂಬೆ